# ನೆಹರು ಜಾಕೆಟ್

*ಕಾಗಿಕಲೆಯೋಣ. ನೆಹರು ಜಾಕೆಟ್ ಔಪಚಾರಿಕವಾದ ಡ್ರೆಸಿಂಗಿನ ಮತ್ತು ಸೆಲೆಬ್ರಿಟಿ ಕಲ್ಚರಿ ಗೆ ಒಂದು ಸಮಾನಾರ್ಥವಾದದ್ದಾಗಿದೆ.*







## ಬೇಕಾಗಿರುವ ವಸ್ತುಗಳು

೪೫ ಇಂಚು ಅಗಲದ ಪ್ರಿಂಟೆಡ್ ಬಟ್ಟೆ
೪೫ ಇಂಚು ಅಗಲದ ಲೈನಿಂಗ್ ಬಟ್ಟೆ
೧/೪ ಮೀಟರ್ ಕಾನ್ವಾಸ್ ಫ್ಯುಸಿಂಗ್
೨ ಮಿಟರ್ ಜಾಕೆಟ್ ಫ್ಯೂಸಿಂಗ್
www.ushasew.com ನಿಂದ ಡೌನ್ಲೂಡ್ ಮಾಡಿಕೊಂಡಿರುವ ಜಾಕೆಟಿನ ಟೆಂಪ್ಲೇಟ್
ಬೀಡೆಡ್ ಪಿನ್
ಚಾಲ್ಕ್
ಕತ್ತರಿ
ಹ್ಯಾಂಡ್ ನೀಡಲ್
ಮ್ಯಾಚಿಂಗ್ ದಾರ

ನಾವು ಟೆಂಪ್ಲೇಟನ್ನು ಮಾರ್ಕ್ ಮಾಡುವುದು, ಬಟ್ಟೆಯನ್ನು ಕಟ್ ಮಾಡುವುದು, ತಯಾರುಮಾಡುವುದು ಮತ್ತು ಪಾಕೆಟನ್ನು ಸೇರಿಸುವುದು, ಮುಂಭಾಗದ ಮತ್ತು ಹಿಂಭಾಗದ ಪೀಸನ್ನು ಸೇರಿಸುವುದು, ಲೈನಿಂಗ್ ಬಟ್ಟೆಯನ್ನು ಮುಖ್ಯವಾದ ಬಟ್ಟೆಗೆ ಸೇರಿಸುವುದು, ಕೊನೆಯಲ್ಲಿ ಕಾಲರನ್ನು ಸೇರಿಸುವುದು.









## ಹಂತ ೧ : ಟೆಂಪ್ಲೇಟನ್ನು ಮಾರ್ಕ್ ಮಾಡಿ ಕಟ್ ಮಾಡುವುದು


ನಿಮಿಷ್ಟದ ಬಟ್ಟೆಯನ್ನು ತೆಗೆದುಕೊಳ್ಳಿ, ಬಟ್ಟೆಯನ್ನು ಪೂರ್ತಿಯಾಗಿ ತೆರೆದು ಹಿಂಭಾಗ ಮೇಲೆ ಬರುವಂತೆ ಇಡಬೇಕು. ನಾವು ಬಟ್ಟೆಯನ್ನು ಜಾಕೆಟಿನೊಂದಿಗೆ ಫ್ಯುಸ್ ಮಾಡಿದ್ದೇವೆ ಸಮಯವನ್ನು ಉಳಿಸಲು. www.ushasew.com ನಿಂದ ಡೌನ್ಲೂಡ್ ಮಾಡಿಕೊಂಡಿರುವ ಟೆಂಪ್ಲೇಟನ್ನು ಬಟ್ಟೆಯಮೇಲಿಡಬೇಕು. ಈಗ ಮುಂಭಾಗ ಎಂದು ಮಾರ್ಕ್ ಮಾಡಿರುವ ಟೆಂಪ್ಲೇಟಿನಿಂದ ಪ್ರಾರಂಭಿಸಿ ಅದನ್ನು ಬಟ್ಟೆಯಮೇಲೆ ಇಡಬೇಕು. ಈ ಎರಡು ಟೆಂಪ್ಲೇಟನ್ನು ಒಟ್ಟಿಗೆ ಸೇರಿಸಲು ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ಇದು ಮುಖ್ಯವಾದ ಹಂತ, ಇದು ಟಂಪ್ಲೇಟನ್ನು ಬಟ್ಟಯ ಮೇಲೆ ಭದ್ರವಾಗಿರಿಸುತ್ತದೆ ಹಾಗೂ ಇದು ಟ್ರೇಸ್ ಮಾಡಲು ಸುಲಭವಾಗಿಸುತ್ತಚೆ. ಹೆಚ್ಚು ಹುಷಾರಾಗಿ ಕರ್ವ್ಡ್ ಎಡ್ಜಸಿನಲ್ಲಿ ಟ್ರೇಸ್ ಮಾಡಿ ಏಕೆಂದರೆ ಇದು ಪ್ಯಾಟರ್ನನನ್ನು ಮುರಿಯಬಹುದು.

ಈಗ, ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಏಟಾಗುವುದನ್ನು ತಪ್ಪಿಸಲು ಬೀಡೆಡ್ ಪಿನ್ ಗಳನ್ನು ಅದರ ಕುಷನಿನಲ್ಲಿ ಇಡಿ. ಅನ್ ಪಿನ್ ಮಾಡಿದ ಮೇಲೆ ಟೆಂಪ್ಲೇಟನ್ನು ಪಕ್ಕಕಿಡಿ. ಕತ್ತರಿಯನ್ನು ತೆಗೆದುಕೊಂಡು ಮತ್ತು ಪೀಸನ್ನು ಕಟ್ ಮಾಡೋಣ. ಇದನ್ನು ನಿಧಾನವಾಗಿ ಮತ್ತು ಅಚುಕಟ್ಟಾಗಿ ಮಾಡಿ. ಇದನ್ನು ಕಟ್ ಮಾಡಿ ಮುಗಿಸಿದ ಮೇಲೆ ಮುಂಭಾಗದ ಪೀಸನ್ನು ಪಕ್ಕಕಿಡಿ.





ಈಗ, ಮಿಕ್ಕಿರುವ ಬಟ್ಟೆಯ ಮೇಲೆ, ಮುಂಭಾಗದ ಎರಡನೆ ಜೊತೆಯನ್ನು ಇಡಬೇಕು. ಎಡಭಾಗ ಮತ್ತು ಬಲಭಾಗ ಎರದನ್ನೂ ಇಡಬೇಕು. ಬೀಡೆಡ್ ಪಿನ್ ಸಹಾಯದಿಂದ ಈ ಎರಡು ಬಟ್ಟೆಯನ್ನು ಪಿನ್ ಮಾಡಿ. ಮುಂಭಾಗದ ಮುಖ್ಯವಾದ ಬಲಭಾಗದ ಬಟ್ಟೆಯಿಂದ ಪ್ರಾರಂಭಿಸೋಣ. ಹಾಗೆ ಇನ್ನೊಂದು ಪೀಸಿನ ಕಡೆ ಹೋಗೋಣ,  ಪಿನ್ ಮಾಡಿದ ಮೇಲೆ ಚಾಲ್ಕನ್ನು ಬಳಸಿ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಕರ್ವ್ಡ್ ಎಡ್ಜನ್ನು ಗಮನಿಸಿ ಟ್ರೇಸ್ ಮಾಡಿ. ಇದನ್ನು ಮುಗಿಸಿದ ಮೇಲೆ ಚಾಲ್ಕನ್ನು ಪಕ್ಕಕಿಟ್ಟು ಟೆಂಪ್ಲೇಟನ್ನು ಬಟ್ಟೆಯಿಂದ ಅನ್ ಪಿನ್ ಮಾಡಿ. ಕತ್ತರಿಯನ್ನು ತೆಗೆದುಕೊಂಡು ಟ್ರೇಸ್ ಮಾಡಿರುವ ಲೈನ್ ಮೇಲೆ ಕತ್ತರಿಸಿ. ಸಣ್ಣ ಪೀಸ್ ಗಳು ಕಟ್ ಮಾಡಲು ಕಷ್ಟ, ಟೆಂಪ್ಲೇಟನ್ನು ಹುಷಾರಾಗಿ ಕಟ್ ಮಾಡಿ. ಕಟ್ ಮಾಡಿರುವ ಪೀಸ್ ಗಳನ್ನು ಪಕ್ಕಕಿಡಿ.







ಈಗ ಮಿಕ್ಕಿರುವ ಬಟ್ಟೆಯನ್ನು ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ ಹಿಂಭಾಗದ ಟೆಂಪ್ಲೇಟನ್ನು ಅದರ ಮೇಲಿಡಿ. ಟೆಂಪ್ಲೇಟಿನ ಒಂದು ಬದಿ ಮಡಚಿ ಎಂದು ಇದೆ ಇದನ್ನು ಗಮನಿಸಿ ಮತ್ತು ಆ ಭಾಗವನ್ನು ಬಟ್ಟೆಯ ಮಡಚಿರುವ ಭಾಗದ ಮೇಲಿಡಿ. ಬಟ್ಟೆಯ ಮೇಲೆ ಟೆಂಪ್ಲೇಟನ್ನು ಪಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ಪಿನ್ ಮಾಡುವಾಗ ಪಿನ್ ಬಟ್ಟೆಯ ಎರಡೂ ಭಾಗಕ್ಕೆ ಹೋಗಿದೆಯೇ ಎಂದು ನೋಡಿಕೊಳ್ಳಿ

ನೀವು ಇದನ್ನು ಮುಗಿಸಿದ ಮೇಲೆ ಚಾಲ್ಕಿನಿಂದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ನಿಧಾನವಾಗಿ ಮತ್ತು ಅಚುಕಟ್ಟಾಗಿ ಈ ವಿಧಾನವನ್ನು ಪಾಲಿಸಿ. ನಂತರ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಪಕ್ಕಕಿಡಿ. ಕತ್ತರಿಯನ್ನು ತೆಗೆದುಕೊಂಡು ಟ್ರೇಸ್ ಮಾಡಿರುವ ಟೆಂಪ್ಲೇಟನ್ನು ಕಟ್ ಮಾಡಿ. ನಿಧಾನವಾಗಿ ಮತ್ತು ಸ್ಥಿರವಾಗಿ ಹಿಂಭಾಗದ ಪೀಸನ್ನು ಕಟ್ ಮಾಡಿ. ಕಟ್ ಮಾಡಿರುವ ಪೀಸನ್ನು ಪಕ್ಕಕಿಡಿ.







ಈಗ ಮಿಕ್ಕಿರುವ ಬಟ್ಟೆಯನ್ನು ಇನ್ನೊಮ್ಮೆ ಮಡಚಿ ಮತ್ತು ಅದರ ಮೇಲೆ ಕಾಲರ್ ಟೆಂಪ್ಲೇಟ್ ಮತ್ತು ಸೀಮ್ ಅಲೋಯನ್ಸನ್ನು ಇಡಬೇಕು. ಎರಡೂ ತುದಿಯನ್ನು ಜಾಗದಲ್ಲಿ ಪಿನ್ ಮಾಡಿ. ಚಾಲ್ಕನ್ನು ಬಳಸಿ ಬಟ್ಟೆಯ ಮೇಲೆ  ಟ್ರೇಸ್ ಮಾಡಿ. ಕರ್ವ್ಡ್ ಎಡ್ಜಸ್ ಸ್ವಲ್ಪ ಕಷ್ಟವಾಗಬಹುದು ಆದರೆ ಅಭ್ಯಾಸದಿಂದ ಅದು ಸಾಧ್ಯವಾಗುತ್ತದೆ. ನಂತರ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಪಕ್ಕಕಿಡಿ.





ಮಿಕ್ಕಿರುವ ಬಟ್ಟೆಯನ್ನು ಈಗಲೇ ಎಸೆಯಬೇಡಿ, ಜಾಕೆಟ್ ಟೆಂಪ್ಲೇಟನ್ನು ಅದರ ಮೇಲಿಟ್ಟು ಅದರ ಜಾಗದಲ್ಲಿ ಪಿನ್ ಮಾಡಿ. ಚಾಲ್ಕನ್ನು ಬಳಸಿ ಟ್ರೇಸ್ ಮಾಡಿ. ನಂತರ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಪೀಸನ್ನು ಕಟ್ ಮಾಡಿ.




ಈಗ ಸಾರಾಂಶ : ನಾವು ಎರಡು ಮೇನ್ ಬಟ್ಟೆ, ಎಡಭಾಗ ಮತ್ತು ಬಲಭಾಗದ್ದು ಅದರೊಂದಿಗೆ ಎರಡನೆ ಮುಂಭಾಗದ ಬಟ್ಟೆ, ಎರಡು ಕಾಲರ್ ಪೀಸ್ ಮತ್ತು ಪಾಕೆಟ್ ಹಾಗೂ ಹಿಂಭಾಗದ ಪೀಸನ್ನು ತಯಾರಿಸಿದ್ದೇವೆ.




ಈಗ ಲೈನಿಂಗ್ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಪೂರ್ತಿಯಾಗಿ ತೆರೆಯಿರಿ. ಇದು ಬಟ್ಟೆಯ ತಪ್ಪಾದ ಭಾಗ ಮತ್ತು ಇದು ಸರಿಯಾದ ಭಾಗ. ತಪಾದ ಭಾಗದ ಮೇಲೆ ಟೆಂಪ್ಲೇಟನ್ನು ಇಟ್ಟು ಮುಂಭಾಗದ ಎಡಭಾಗ ಮತ್ತು ಬಲಭಾಗವನ್ನು ಮಾರ್ಕ್ ಮಾಡಿ ಅದರೊಂದಿಗೆ ಜಾಕೆಟಿನ ಪಾಕೆಟ್ ಟೆಂಪ್ಲೇಟನ್ನು ಟ್ರೇಸ್ ಮಾಡಿ. ನಾವು ಇದೇ ವಿಧಾನವನ್ನು ನಾವು ಮೊದಲಿನಂತೆ ಪುನರಾವರ್ತಿಸಬೇಕು. ಬಟ್ಟೆಯನ್ನು ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ.ಪೂರ್ತಿ ಟೆಂಪ್ಲೇಟನ್ನು ಪಿನ್ ಮಾಡಿ ಇದು ಬಟ್ಟೆಯನ್ನು ಟ್ರೈಸ್ ಮಾಡುವಾಗ ಭದ್ರವಾಗಿ ಹಿಡಿದುಕೊಳ್ಳುತ್ತದೆ. ಇದನ್ನು ಮುಗಿಸಿದ ಮೇಲೆ, ನಿಧಾನವಾಗಿ ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಮುಂಭಾಗದ ಲೈನಿಂಗ್ ಎಡಭಾಗದಿಂದ ಪ್ರಾರಂಭಿಸಿ ನಂತರ ಇನ್ನೊಂದು ಟೆಂಪ್ಲೇಟಿನ ಕಡೆಗೆ ಟ್ರೇಸ್ ಮಾಡಿ. ಕರ್ವ್ಸ್ ಎಡ್ಜಸ್ಸಲ್ಲಿ ಟ್ರೇಸ್ ಮಾಡುವಾಗ ನಿಮ್ಮ ಕೈ ಸ್ಥಿರವಾಗಿರಲಿ . ಟ್ರೇಸಿಂಗ್ ಆದ ಮೇಲೆ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಪಕ್ಕಕಿಡಿ.







ಈಗ ಟ್ರೇಸ್ ಮಾಡಿರುವ ಗೆರೆಯ ಮೇಲೆ ಕಟ್ ಮಾಡಿ. ಈ ಹಂತವನ್ನು ಸ್ಥಿರವಾಗಿ ಮಾಡಿ ಇದು ಬಹು ಆಕಾರದಲ್ಲಿರಲು ಬಹು ಹಾಗು ಅಳತೆ ಸರಿಯಾಗಿ ಬರಲು ಮುಖ್ಯವಾದದ್ದು. ಮೂರು ಪೀಸ್ ಕಟಿಂಗ್ ಮಾಡಿದ ಮೇಲೆ  ಬಟ್ಟೆಯನ್ನು ತಿರುಗಿಸಿ ಬಲಭಾಗವನ್ನು ನಿಮ್ಮನ್ನು ನೋಡುವಂತೆ ಇಟ್ಟು ಟುಟೋರಿಯಲಿನಲ್ಲಿ ತೋರಿಸಿದಂತೆ ಮಡಚಿ. ಹಿಂಭಾಗದ ಟೇಂಪ್ಲೇಟನ್ನು ಬಟ್ಟೆಯ  ಮಡಚಿರುವ ಭಾಗದ ಮೇಲಿಡಿ.  ಟೆಂಪ್ಲೇಟಿನ ಮೇಲೆ ಮಡಚಿ ಎಂದು ಬರೆದಿರುವ ಭಾಗ ಬಟ್ಟೆಯ ಮಡಚಿರುವ ಭಾಗದ ಮೇಲೆ ಸರಿಯಾಗಿ ಇಡಿ. ನಂತರ ಬೀಡೆಡ್ ಪಿನ್ ಸಹಾಯದಿಂದ ಪಿನ್ ಮಾಡಿ. ನಂತದ ಚಾಲ್ಕನ್ನು ಬಳಸಿ ಟೆಂಪ್ಲೇಟನ್ನು ಟ್ರೇಸ್ ಮಾಡಿ, ಟ್ರೇಸಿಂಗ್ ಮುಗಿದ ಮೇಲೆ ಮೊದಲಿನಂತೆ ಅನ್ ಪಿನ್ ಮಾಡಿ ಟೇಂಪ್ಲೇಟನ್ನು ಪಕ್ಕಕಿಡಿ. ನೀವು ಬಟ್ಟೆಯನ್ನು ಮತ್ತೆ ಪಿನ್ ಮಾಡಬಹುದು ಕಟ್ ಮಾಡುವಾಗ ಹೆಚ್ಚು ಭದ್ರತೆಗಾಗಿ. ನಂತರ ಕತ್ತರಿಯನ್ನು ಬಳಸಿ ಟ್ರೇಸ್ ಮಾಡಿರುವ ಗೆರೆಯ ಮೇಲೆ ಕಟ್ ಮಾಡಿ.






ಸಾರಾಂಶ : ಲೈನಿಂಗ್ ಬಟ್ಟೆಯಿಂದ ನಾವು ಎಡಭಾಗ, ಮುಂಭಾಗದ ಬಲಭಾಗ ಮತ್ತು ಜಾಕೆಟಿನ ಪಾಕೆಟ್ ಪೀಸನ್ನು ಕಟ್ ಮಾಡಿದ್ದೇವೆ. ಇದನ್ನು ಪಕ್ಕಕಿಡಿ.




ನಂತರ, ಫ್ಯೂಸಿಂಗ್ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಿ, ಕಾಲರ್ ಎಂದು ಮಾರ್ಕ್ ಮಾಡಿರುವ ಟೆಂಪ್ಲೇಟನ್ನು ಬಟ್ಟೆಯ ಮೇಲಿಟ್ಟು ಟ್ರೇಸ್ ಮಾಡಿ. ಇದನ್ನು ಮುಗಿಸಿದ ಮೇಲೆ, ಕತ್ತರಿಯನ್ನು ಬಳಸಿ ಪೀಸನ್ನು ಕಟ್ ಮಾಡಿ. ನಾವು ಮೊದಲನೆ ಹಂತವನ್ನು ಮುಗಿಸಿದ್ದೇವೆ!



## ಹಂತ ೨ : ಪಾಕೆಟನ್ನು ತಯಾರಿಸುವುದು ಮತ್ತು ಅದನ್ನು ಬಟ್ಟೆಯ ಮುಂಭಾಗಕ್ಕೆ ಹೊಲೆಯುವುದು




ಜಾಕೆಟ್ ಪಾಕೆಟಿನ  ಎರಡು ಪೀಸ್ ಗಳನ್ನು ತೆಗೆದುಕೊಳ್ಳಿ, ಒಂದು ಮೇನ್ ಬಟ್ಟೆ ಇನ್ನೊಂದು ಲೈನಿಂಗ್ ಬಟ್ಟೆ. ಈ ಎರಡು ಬಟ್ಟೆಯನ್ನು ಸೇರಿಸಿ, ಟುಟೋರಿಯಲಿನಲ್ಲಿ ತೋರಿಸಿದಷ್ಟೆ ಬಲಭಾಗ ಬಲಭಾಗಕ್ಕೆ , ಅದನ್ನು ಸರಿಯಾಗಿ ಪಿನ್ ಮಾಡಿ ಮತ್ತು ಮೇಲ್ಭಾಗದಲ್ಲಿಡಿ.






ಈಗ ಅದನ್ನು ಒಟ್ಟಿಗೆ ಹೊಲೆಯೋಣ. ಪಿನ್ ಮಾಡಿರುವ ಬಟ್ಟೆಯನ್ನು ಊಷಾ ವಂಡರ್ ಸ್ಟಿಚ್ ಪ್ಲಸ್ ಮಷೀನಿನ ಹತ್ತಿರ ತೆಗೆದುಕೊಂಡು ಹೋಗಿ ಮತ್ತು ಜಕೆಟಿನ ಪಾಕೆಟ್ಟಿನ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ನಿಮ್ಮ ಪ್ಯಾಟರ್ನ್ ಸ್ಟಿಚನ್ನು ನೇರ ಹೊಲಿಗೆಗಾಗಿ A ಮತ್ತು ಹೊಲಿಗೆಯ ಉದ್ದ ೨.೫ ಗೆ ಇದೆಯೇ ನೋಡಿಕೊಳ್ಳಿ ಮತ್ತು ಹೊಲೆಯಲು ಪ್ರಾರಂಭಿಸಿ. ಇನ್ನೊಂದು ತುದಿ ತಲುಪಿದಾಗ ಪ್ರೆಸ್ಸರ್ ಫುಟನ್ನು ತೆಗೆದು, ದಾರವನ್ನು ಕತ್ತರಿಸಿ ಪಿನ್ ಗಳನ್ನು ತೆರೆಯಿರಿ. ಉತ್ತಮವಾದ ಫಿನಿಷಿಂಗಾಗಿ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ.










ನೀವು ನೋಡಬಹುದು, ನಾವು ಜಾಕೆಟಿನ ಪಾಕೆಟಿನ ಮೇಲ್ಭಾಗದ ತುದಿಯನ್ನು ಹೊಲೆದಿದ್ದೇವೆ, ಈಗ ಪಾಕೆಟನ್ನು ಓಪೆನ್ ಮಾಡಿ ಅದನ್ನು ತಪ್ಪಾದ ಭಾಗಕ್ಕೆ ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ, ಕಾಲು ಇಂಚು ಮಾರ್ಜಿನನ್ನು ಎಲ್ಲಾ ಕಡೆ ಮೊದಲೆ ಹೇಳಿದಂತೆ ಬಿಡಲು ಮೆರೆಯಬೇಡಿ. ಹೊಲೆಯಲು ಸುಲಭವಾಗುವಂತೆ ಈ ಮಡಕೆಯನ್ನು ಸೆಟ್ ಮಾಡಲು ನಾವು ಜಾಕೆಟ್ ಪಾಕೆಟನ್ನು ಐರನ್ ಮಾಡಬೇಕು. ಇದನ್ನು ತಿಳಿಸಿದಂತೆ ಎಲ್ಲಾ ಕಡೆ ಕಾಲು ಇಂಚು ಬಿಡಬೇಕು. ಕಾರ್ನರಲ್ಲಿ ಐರನ್ ಮಾಡಲು ಸುಲಭವಾಗುವಂತೆ ಬಟ್ಟೆಗೆ ನಾಚಸನ್ನು ಮಾಡಿ. ಪಾಕೆಟನ್ನು ಲೈನಿಂಗ್ ಮೇಲೆ ಮಡಚಿ ಮತ್ತು ಸ್ಲಾಶಿಂಗ್ ಮಾಡಿದ ಮೇಲೆ ಅದರ ಮೇಲೆ ಐರನ್ ಮಾಡಿ. ಕೈಯನ್ನು ಯಾವುದೇ ಏಟಾಗದಂತೆ ಗಮನವಹಿಸಿ. ಮಡಚುವುದನ್ನು ಮುಂದುವರಿಸಿ ಐರನ್ ಮಾಡುತ್ತಾಹೋಗಿ. ಇದನ್ನು ಮುಗಿಸಿದ ಮೇಲೆ, ಜಾಕೆಟ್ ಪಾಕೆಟನ್ನು ನಿಧಾನವಾಗಿ ಪಕ್ಕಕಿಡಿ ಮತ್ತು ಮುಂಭಾಗದ ಎಡಭಾಗವನ್ನು ತೆಗೆದುಕೊಂಡು ಅದನ್ನು ಬಲಭಾಗ ಮೇಲೆ ಬರುವಂತೆ ಇಟ್ಟು ೧೦ ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ಐರನ್ ಮಾಡಿರುವ ಜಾಕೆಟ್ ಪಾಕೆಟನ್ನು ೧೦ ಇಂಚು ಮಾರ್ಕ್ ಮಾಡಿರುವುದರ ಕೆಳಗೆ ಇಡಿ. ಇದು ನೇರವಾಗಿದೆಯೇ ನೋಡಿಕೊಳ್ಳಿ ಮತ್ತು ಸೊಟ್ಟವಲ್ಲಾ, ಮತ್ತು ಇದು ಎಡಭಾಗ ಮತ್ತು ಬಲಭಾಗದಿಂದ ಮಧ್ಯದಲ್ಲಿದೆಯೇ ನೋಡಿಕೊಳ್ಳಿ, ಇದನ್ನು ಜಾಗದಲ್ಲಿ ಪಿನ್ ಮಾಡುತ್ತಾ ಎಲ್ಲಾ ಕಡೆಗೂ ಪಿನ್ ಮಾಡಿ. ನಾವು ಎಡ್ಜಸನ್ನು ಹೊಲೆಯುತ್ತೇವೆ ಮೇಲ್ಭಾಗವನ್ನು ಹಾಗೆ ಹೊಲೆಯದೆ ಬಿಡುತ್ತೇವೆ.






ಜಾಕೆಟ್ ಪಾಕೆಟಿನ ತುದಿಯನ್ನು ಪ್ರೆಸ್ಸರ್ ಫ್ರೂಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಹೊಲೆಯುತ್ತಾ ಹೋಗುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಮತ್ತು ತುದಿಯನ್ನು ತಲುಪಿದಾಗ ಪಿವಟ್ ಟೆಕ್ನಿಕನ್ನು ಬಳಸಿ ಅದರಲ್ಲಿ ನಾವು ಬಟ್ಟೆಯನ್ನು ಸೂಜಿಯನ್ನು ತೆಗೆಯದೆ ತಿರುಗಿಸಬೇಕು ಇದು ಪೂರ್ತಿಯಾಗಿ ನೇರವಾದ ಹೊಲಿಗೆ ಬರಲು ಸಹಾಯವಾಗುತ್ತದೆ. ಸುತ್ತಲೂ ವೃತಾಕಾರದ ರಿವೆರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ, ಈ ಹಂತ ನಮ್ಮ ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಹೆಚ್ಚಾದ ದಾರವನ್ನು ಕತ್ತರಿಸಿ, ನೀವು ನೋಡಬಹುದು, ನಾವು ಜಾಕೇಟ್ ಪಾಕೆಟನ್ನು ಮೇನ್ ಬಟ್ಟೆಗೆ ಹೊಲೆದಿದ್ದೇವೆ.









## ಹಂತ ೩ : ಮುಂಭಾಗ ಮತ್ತು ಹಿಂಭಾಗವನ್ನು ತೋಳನ್ನು ಹೊಲೆಯುವುದರೊಂದಿಗೆ ಸೇರಿಸುವುದು

ಈಗ, ಮುಂದಿನ ಹಂತಕ್ಕೆ, ಇನ್ನೊಂದು ಮೇನ್ ಬಟ್ಟೆಯನ್ನು ತೆಗೆದುಕೊಳ್ಳಿ, ಹಿಂಭಾಗವನ್ನು ಮುಂಭಾಗದ ಎರಡು  ಬಟ್ಟೆಯ ಮೇಲೆ ಟುಟೋರಿಯಲಿನಲ್ಲಿ ತೋರಿಸಿರುವಂತೆ ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು. ಭುಜದ ಭಾಗವನ್ನು ಅಲೈನ್ ಮಾಡಿ ಅದನ್ನು ಜಾಗದಲ್ಲಿ ಸರಿಯಾಗಿ ಪಿನ್ ಮಾಡಿ. ಇದನ್ನು ಎರಡೂ ಕಡೆ ಮಾಡಿ. ನಾವು ಈಗ ಭುಜದ ಬಭಾಗವನ್ನು ಹೊಲೆಯುತ್ತೇವೆ.

ಪಿನ್ ಮಾಡಿರುವ ಬಟ್ಟೆಯನ್ನು ಊಷಾ ಜನೋಮ್ ಸ್ಟಿಚ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ ಹೊಲೆಯಲು ಪ್ರಾರಂಭಿಸಿ ಭುಜದ ಭಾಗದ ತುದಿಯನ್ನು ಪ್ರೆಸ್ಸರ್ ಫೂಟಿಗೆ ಅಲೈನ್ ಮಾಡಿ. ನಿಧಾನವಾಗಿ ಕೊನೆಯವರೆಗೂ ಹೊಲೆಯುತ್ತಾ ಹೋಗಿ. ಕೊನೆಯಲ್ಲಿ ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ಒಂದು ಕಡೆ ಮುಗಿಸಿದ ಮೇಲೆ ಇನ್ನೊಂದು ಭುಜವನ್ನೂ ಹೊಲೆಯಿರಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.












## ಹಂತ ೪ : ಲೈನಿಂಗ್ ಬಟ್ಟೆಯನ್ನು ತಯಾರಿಸುವುದು

ನಾವೀಗ ಲನಿಂಗ್ ಬಟ್ಟೆಯ ಕೆಲಸವನ್ನು ಮಾಡಬೇಕು. ಮುಂಭಾಗದ ಲೈನಿಂಗ್ ಪೀಸ್ ಮತ್ತು ನಾವು ಮೇನ್ ಬಟ್ಟೆಯಿಂದ ಎರಡನೆ ಮುಂಭಾಗದ ಪೀಸನ್ನು ತೆಗೆದುಕೊಳ್ಳಿ ಟುಟೋರಿಯಲಿನಲ್ಲಿ ತೋರಿಸಿರುವಂತೆ ಇದನ್ನು ಜೋಡಿಸಿ, ಈಗ ಮೇನ್ ಬಟ್ಟೆಯನ್ನು ಲೈನಿಂಗ್ ಬಟ್ಟೆಯ ಮೇಲಿಡಿ ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಮತ್ತು ಅದನ್ನು ಜಾಗದಲ್ಲಿ ಪಿನ್ ಮಾಡಿ. ಇನ್ನೊಂದು ಕಡೆಗೂ ಇದನ್ನೇ ಮಾಡಿ.

ನಾವು ಈಗ ನಾವು ಒಟ್ಟಿಗೆ ಹೊಲೆಯುತ್ತಾ ಒಂದು ಸುತ್ತು ನೇರವಾದ ಹೊಲಿಗೆಯನು ಎಡ್ಜಿನಲ್ಲಿ ಹಾಕೋಣ. ಪಿನ್ ಮಾಡಿರುವ ಬಟ್ಟೆಯನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ  ಹೊಲೆಯಲು ಪ್ರಾರಂಭಿಸಿ. ಹೊಲೆಯುತ್ತಾ ಹೋಗುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಒಮ್ಮೆ ತುದಿಯನ್ನು ತಲುಪಿದ ಮೇಲೆ ಹೊಲೆಯುವುದನ್ನು ನಿಲ್ಲಿಸಿ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ಪೀಸನ್ನು ಪಕ್ಕಕಿಟ್ಟು ಇನ್ನೊಂದು ಕಡೆಗೂ ಇದನ್ನೇ ಮಾಡಿ. ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆ ಪ್ರತಿ ಸಾರಿ ನೇರ ಹೊಲಿಗೆ ಹಾಕುವಾಗ ಹಾಕಿದೆಯೇ ಎಂದು ಖಚಿತಪಡಿಸಿಕೊಳ್ಳಿ ಇದು ನಿಮ್ಮ ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಇದನ್ನು ಮುಗಿಸಿದ ಮೇಲೆ ಹೆಚ್ಚಾದ ದಾರವನ್ನು ಕತ್ತರಿಸಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.

ನೀವು ನೋಡಬಹುದು, ನಾವು ಲೈನಿಂಗ್ ಬಟ್ಟೆ ಮತ್ತು ಮೇನ್ ಬಟ್ಟೆಯನ್ನು ಒಟ್ಟಿಗೆ ಹೊಲೆದಿದ್ದೇವೆ. ಈಗ ಮಡಚಿರುವುದನ್ನು ತೆಗೆದು ಅದರ ಮೇಲೆ ಐರನ್ ಮಾಡಿ. ಇದು ಮಡಕೆಯನ್ನು ಸೆಟ್ ಮಾಡಲು ಸಹಾಯವಾಗುತ್ತದೆ ಮತ್ತು ಹೊಲಿಗೆಗಳು ಸೆಟಲ್ ಆಗುತ್ತದೆ. ಎರಡೂ ಬಟ್ಟೆಯನ್ನು ಐರನ್ ಮಾಡಿ. ಐರನ್ ಮಾಡಿರುವ ಬಟ್ಟೆಗಳನ್ನು ತೆಗೆದುಕೊಂಡು ಬಲಭಾಗ ಮೇಲೆ ಬರುವಂತೆ ಇಡಬೇಕು. ಈಗ ಲೈನಿಂಗ್ ಬಟ್ಟೆಯನ್ನು ಅದರ ಮೇಲಿಡಿ ಬಲಭಾಗ ಬಲಭಾಗವನ್ನು ನೋಡುವಂತಿರಬೇಕು.






ಎರಡೂ ಭುಜದ ಭಾಗವನ್ನು ಸೇರಿಸಿ ಪಿನ್ ಮಾಡಿ. ಪಿನ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಇದನ್ನು ಮುಗಿಸಿದ ಮೇಲೆ ಇದೇ ವಿಧಾನವನ್ನು ಇನ್ನೊಂದು ಕಡೆನೂ ಮಾಡಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.

## ಹಂತ ೫ : ಲೈನಿಂಗ್ ಬಟ್ಟೆಯನ್ನು ಮೇನ್ ಬಟ್ಟೆಗೆ ಸೇರಿಸುವುದು








ಭುಜದ ಭಾಗವನ್ನು ಹೊಲೆದ ಮೇಲೆ, ಲೈನಿಂಗ್ ಬಟ್ಟೆಯನ್ನು ಪಕ್ಕಕಿಟ್ಟು ಮೇನ್ ಬಟ್ಟೆಯನ್ನು ತೆಗೆದುಕೊಳ್ಳಿ, ಇದನ್ನು ಪೂರ್ತಿ ತೆರೆದು, ಬಲಭಾಗ ನಿಮ್ಮನ್ನು ನೋಡುವಂತಿರಬೇಕು ಮತ್ತು ಲೈನಿಂಗ್ ಬಟ್ಟೆಯನ್ನು ಅದರ ಮೇಲಿಡಿ.ಬಲಭಾಗ ಬಲಭಾಗವನ್ನು ನೋಡುವಂತೆ ಇರಬೇಕು. ನಾವು ಆರ್ಮ್ ಹೋಲನ್ನು ಮತ್ತು ಸೈಡನ್ನು ಹೊಲೆಯುತ್ತಾ ಲೈನಿಂಗ್ ಬಟ್ಟೆಯನ್ನು ಮೇನ್ ಬಟ್ಟೆಗೆ ಹೊಲೆಯಬೇಕು. ಒಮ್ಮೆ ಇದನ್ನು ಸೇರಿಸಿದ ನಂತರ ನಾವು ಸೈಡ್ ಸೀಮನ್ನು ಹೊಲೆಯುತ್ತೇವೆ. ಹೇಗಾದರೂ ಅದಕ್ಕೆ ಮುಂಚೆ ಬಾಟಮಿನಿಂದ ೩ –೫ ಇಂಚು ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ. ನಾವು ಇದಕ್ಕೆ ಕಾರಣವನ್ನು ಮುಂದೆ ಟುಟೋರಿಯಲಿನಲ್ಲಿ ತೋರಿಸುತ್ತೇವೆ.










ಮೊದಲು ನಾವು ಲೈನಿಂಗ್ ಬಟ್ಟೆ ಮತ್ತು ಮೇನ್ ಬಟ್ಟೆಯನ್ನು ಸೇರಿಸೋಣ. ಈಗ ನಿಮ್ಮ ಬಟ್ಟೆಯನ್ನು ಊಷಾ ವಂಡರ್ ಸ್ಟಿಚ್ ಪ್ಲಸ್ ಹತ್ತಿರ ತೆಗೆದುಕೊಂಡು ಹೋಗಿ ನಾವು ಬಟ್ಟೆಗಳನ್ನು ಒಟ್ಟಿಗೆ ಸೇರಿಸಿ ನೆಕ್ಲೈನಿನ ಎಕ್ ಟೆಂಶನಿನೊಂದಿಗೆ ನೆಕ್ ಲೈನನ್ನು ಹೊಲೆಯಬೇಕು. ಅಂಚಿನಲ್ಲಿ ಪಿವಟ್ ಟೆಕ್ನಿಕನ್ನು ಬಳಸಿ ಹೊಲೆಯುವುದನ್ನು ಮುಂದುವರಿಸಿ. ನಂತರ ಜಾಕೆಟ್ ಓಪೆನಿಂಗ್ ಕಡೆಗೆ ಮುಂದುವರಿದು ನಿಧಾನವಾಗಿ ಬಾಟಮಿನವರೆಗೂ ಹೊಲೆಯುತ್ತಾ ಹೋಗಿ. ನೀವು ೩–೫ ಮಾರ್ಕ್ ಇರುವ ವರೆಗೂ ಹೊಲೆಯಿರಿ ಮತ್ತು ನಿಲ್ಲಿಸಿ. ನಾವು ನೆಕ್ ಲೈನನ್ನು ೧ ಇಂಚು ಹೊಲೆಯಬೇಕು ನಿಧಾನವಾಗಿ ಮತ್ತು ಸ್ಥಿರವಾಗಿ ಜಾಕೆಟ್ ಓಪೆನಿಂಗ್ ವರೆಗೂ ಇಲ್ಲಿ ಹೇಳಿರುವಂತೆ ಹೊಲೆಯುತ್ತಾ ಹೋಗಿ. ನೆಕ್ ಲೈನಿನಿಂದ ಪ್ರಾರಂಭಿಸಿ ಹಾಗೆ ನಿಧಾನವಾಗಿ ಸ್ಥಿರವಾಗಿ ಜಾಕೆಟ್ ಓಪೆನಿಂಗಿನ ವರೆಗೂ ನಂತರ ಬಾಟಮಿನ ಕಡೆಗೆ ಹೋಗಿ ನಂತರ ಸೈಡ್ಡಿನ ಕಡೆ. ಣೀವು ೩–೫ ಇಂಚು ಮಾರ್ಕನ್ನು ತಲುಪದಾಗ ನಿಲ್ಲಿಸಿ.








ಈಗ, ಹಿಂಭಾಗಕ್ಕೆ ಹೋಗೋಣ. ಬಟ್ಟೆಗಳನ್ನು ಮಡಚಿ  ಇದು ೩/೫ ಇಂಚು ಮಾರ್ಕ್ ಹಿಂಬದಿಗೆ ಬರುವಂತಿರಬೇಕು. ಇದನ್ನು ಎಡಭಾಗ ಮತ್ತು ಬಲಭಾಗ, ಎರಡೂ ಕಡೆನೂ ಮಾಡಬೇಕು. ಇದನ್ನು ನೀವು ಮುಗಿಸಿದ ಮೇಲೆ, ನಾವು ಮಾರ್ಕ್ ಮಾಡಿರುವ ಪಾಯಿಂಟಿನಿಂದ ಪ್ರಾರಂಭಿಸಿ ಬಾಟಮ್ ಲೈನಿಗೆ ಅಡ್ಡವಾಗಿ ಹೊಲದು, ಮಾರ್ಕ್ಡ್ ಪಾಯಿಂಟಿನ ಎದುರು ತಲಪುವವರೆಗೂ ಹೊಲೆಯಬೇಕು. ನಾವಿ ಪಿವಟ್ ಟೆಕ್ನಿಕನ್ನು ಇಲ್ಲಿ ಬಳಸುತ್ತೀವೆ ಇದು ಒಂದು ನೇರವಾದ ಗೆರೆ ಬರಲು ಖಾತ್ರಿಯಾಗುತ್ತದೆ. ನೀವು ಇದನ್ನು ಮುಗಿಸಿದ ಮೇಲೆ, ಹೆಚ್ಚಾದ ದಾರವನ್ನು ಕತ್ತರಿಸಿ.



ನಂತರ ನಮ್ಮ ಪಟ್ಟಿಯಲ್ಲಿರುವುದು ಆರ್ಮ್ ಹೋಲ್. ಬರಿ ಆರ್ಮ್ ಹೋಲನ್ನು ಹೊಲೆಯಿರಿ ಕೊನೆಯಿಂದ ಓಪೆನಿಂಗನ್ನು ೩–೫ ಇಂಚು ಮಾರ್ಕ್ ಮಾಡಿರುವುದನ್ನು ಬಿಟ್ಟು ಹೊಲೆಯಬೇಕು ಅದನ್ನು ಮುಟ್ಟಬಾರದು. ಇದೇ ವಿಧಾನವನ್ನು ಇನ್ನೊಂದು ಕಡೆನೂ ಮಾಡಬೇಕು. ಒಮ್ಮೆ ಇದನ್ನು ಮುಗಿಸಿದ ಮೇಲೆ ನಾವು ವೃತ್ತಾಕಾರದ ಏರಿಯಾ ಮೇಲೆ ಸರ್ಕ್ಯುಲರ್ ನಾಚಸನ್ನು ಹಾಕಬೇಕು, ಆರ್ಮ್ ಹೋಲ್ ಮತ್ತು ಬಾಟಮ್ ಹೆಮ್ಮಿನ ಮೇಲೆ ಟುಟೋರಿಯಲಿನಲ್ಲಿ ತೋರಿಸಿದಂತೆ ಹಾಕಬೇಕು. ಇದು ಬಟ್ಟೆ ಹಾಕೊಕೊಂಡಾಗ ಸರಿಯಾಗಿ ಕೂರುತ್ತದೆ. ಆರ್ಮ್ ಹೋಲಿನಿಂದ ಪ್ರಾರಂಭಿಸಿ ನಂತರ ಬಾಟಮ್ ಹೆಮ್ಮಿನಕಡೆಗೆ ಹೊಲೆಯಿರಿ. ಇದೇ ವಿಧಾನವನ್ನು ಇನ್ನೊಂದು ಪಡೆಗೂ ಅನುಸರಿಸಿ. ನಾಚಸನ್ನು ಆರ್ಮ್ ಹೋಲ್ ಮತ್ತು ಬಾಟಮ್ ಹೆಮ್ಮಿನಲ್ಲಿ ಹಾಕಿ. ಹಾಹೆ ನೆಕ್ ಲೈನನ್ನು ಸ್ಲಾಷ್ ಮಾಡಿ ಕಾರ್ನರ್ ಅಲೋಯನ್ನು ಇಲ್ಲಿ ತೋರಿಸಿದಂತೆ ಟ್ರಿಮ್ ಮಾಡಿ


## ಹಂತ ೬ : ಸೈಡ್ ಸೀಮನ್ನು ಮುಗಿಸುವುದು

ನಾವು ಈಗ ಸೈಡ್ ಸೀಮಿನ ಕಲಸ  ಮಾಡೋಣ. ನಾವು ಮುಂಭಾಗದ ಸೈಡ್ ಸೀಮನ್ನು ಹೊಲೆದು ನಂತರ ಹಿಂಭಾಗವನ್ನು ಒಟ್ಟಿಗೆ ಹೊಲೆಯೋಣ. ಆದರೆ ನೀವು ಮೇನ್ ಬಟ್ಟೆಯ ಕೆಲಸ ಮಾತ್ರ ಮಾಡುತ್ತಿದೀರ ಎಂದು ಖಚಿತಪಡಿಸಿಕೊಳ್ಳೀ. ಎರಡೂ ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಸ್ಲಿಟಿನಿಂದ ಪ್ರಾರಂಭಿಸಿ, ಆರ್ಮ್ ಹೋಲಿನವರೆಗೂ ಹೊಲೆಯಿರಿ. ಆರ್ಮ್ ಹೋಲಿನ ಹತ್ತಿರ ಬಂದಾಗ, ಅದು ಸರಿಯಾಗಿ ಅಲೈನ್ ಆಗಿದೆಯೇ ನೋಡಿಕೊಳ್ಳಿ ಮತ್ತು ಅದರ ಮೇಲೆ ಹೊಲೆಯಿರಿ. ನಾವೀಗ ಲೈನಿಂಗ್ ಬಟ್ಟೆಯ ಕಡೆಗೆ ಹೋಗಿ ಹೊಲೆಯಲು ಮಂದುವರೆಸೋಣ. ಮುಂಭಾಗ ಮತ್ತು  ಹಿಂಭಾಗದ ಲೈನಿಂಗ್ ಪೀಸನ್ನು ಒಟ್ಟಿಗೆ ಹೊಲೆಯಿರಿ. ಹೊಲೆಯುತ್ತಾ ನೀವು ಸ್ಲಿಟಿನಿಂದ ೫ ಇಂಚು ತಲಪುವವರೆಗೂ ಹೊಲೆಯಿರಿ. ಸ್ಟಿಚಸನ್ನು ಲಾಕ್ ಮಾಡಿ ದಾರವನ್ನು ಕತ್ತರಿಸಿ. ಲನಿಂಗನ್ನು ಹಾಗೆ ಬಿಡೋಣ ಮತ್ತು ಮೇನ್ ಬಟ್ಟೆಯನ್ನು ಕೊನೆವರೆಗೂ ಹೊಲೆಯೋಣ. ಮೇನ್ ಬಟ್ಟೆ ಮೇಲೆ ಮಾತ್ರ ಹೊಲೆಯಿರಿ ಹಾಗೆ ಮುಂದುವರೆದು ಲೈನಿಂಗ್ ಬಟ್ಟೆವರೆಗೂ ಹೊಲೆಯಿರಿ. ಇದು ಮುಗಿದ ಮೇಲೆ ದಾರವನ್ನು ಕತ್ತರಿಸಿ. ನೀವು ನೋಡಬಹುದು, ನಾವು ಸೈಡ್ ಸೀಮಿನ ಲೈನಿಂಗ್ ಭಾಗವನ್ನು ಹೊಲೆಯದೆ ಹಾಗೆ ಬಿಟ್ಟಿದ್ದೇವೆ.



























ಇದನ್ನು ಆಮೇಲೆ ಕೈಯಲ್ಲಿ ಹೆಮ್ಮ್ ಮಾಡಬೇಕು. ನಾವು ಇದೇ ವಿಧಾನವನ್ನು ಇನ್ನೊಂದು ಸೈಡ್ ಸೀಮಿಗೂ ಮಾಡಬೇಕು.

ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ನಾವು ಎಲ್ಲಾ ಮಡಚಿರುವ ಭಾಗದ ಮೇಲೆ ಐರನ್ ಮಾಡಬೇಕು. ಬಾಟಮಿನಿಂದ ಪ್ರಾರಂಭಿಸಿ ಜಾಕೆಟಿನ ಓಪೆನಿಂಗ್ ವರೆಗೂ ಐರನ್ ಮಾಡಬೇಕು. ಮಡಚಿರುವ ಭಾಗಗಳನ್ನು ಹೊಂದಿಸುತ್ತಾ ಐರನ್ ಮಾಡುತ್ತಾ ಹೋಗಬೇಕು, ಮಡಚಿರುವ ಭಾಗಗಳು ಚೂಪಾಗಿರಬೇಕು. ಆರ್ಮ್ ಹೋಲನ್ನು ಐರನ್ ಮಾಡಲು ಮರೆಯಬೇಡಿ. ಇದು ಮುಖ್ಯವಾದ ಹಂತ ಏಕೆಂದರೆ ಇದು ನಮ್ಮ ಬಟ್ಟೆಗೆ ಮೃದುವಾದ ಫಿನಿಷನ್ನು ಕೊಡುತ್ತದೆ. ನಾವು ಮುಂಭಾಗದ ಫೋಲ್ಡನ್ನು, ಬಾಟಮನ್ನು, ಆರ್ಮ್ ಹೋಲನ್ನು ಮತ್ತು ಸೈಡ್ ಸೀಮನ್ನು ಐರನ್ ಮಾಡಿದ್ದೇವೆ.

## ಹಂತ ೭ : ಕಾಲರನ್ನು ತಯಾರಿಸಿ ಅದನ್ನು ಸೇರಿಸುವುದು

ಅಂತಿಮ ಹಂತಕ್ಕಾಗಿ ನಾವು ಕಾಲರನ್ನು ಸೇರಿಸುವುದರ ಕೆಲದ ಮಾಡೋಣ. ಬಟ್ಟೆಯನ್ನು ಪಕ್ಕಕಿಟ್ಟು ಕಾಲರ್ ಪೀಸ್ ಗಳನ್ನು ತೆಗೆದುಕೊಳ್ಳಿ, ನಿಮ್ಮ ಹತ್ತಿರ ಎರಡು ಮೇನ್ ಬಟ್ಟೆ ಮತ್ತು ಎರಡು ಫ್ಯುಸಿಂಗ್ ಬಟ್ಟೆ ಇರಬೇಕು. ಒಂದು ಮೇನ್ ಬಟ್ಟೆಯ ಕಾಲರ್ ಪೀಸನ್ನು ತಿರುಗಿಸಿ ಟುಟೋರಿಯಲಿನಲ್ಲಿ ತೋರಿಸಿದಂತೆ ಫ್ಯುಸಿಂಗ್ ಬಟ್ಟೆಯನ್ನು ಅದರ ಮೇಲೆ ಇಡಬೇಕು. ನಂತರ, ಈ ಎರಡು ಬಟ್ಟೆಯನ್ನು ಐರನ್ ಬೋರ್ಡ್ ಮೇಲೆ ಇಟ್ಟು ಊಷಾ ಐರನನ್ನು ಉಪಯೋಗಿಸಿ ಈ ಎರಡು ಪೀಸನ್ನು ನಿಧಾನವಾಗಿ ಪ್ರೆಸ್ ಮಾಡುತ್ತಾ ಫ್ಯೂಸಿಂಗ್ ಬಟ್ಟೆಯನ್ನು ಮೇನ್ ಬಟ್ಟೆಗೆ ಸೇರಿಸಿ. ನಂತರ, ಇನ್ನೊಂದು ಫ್ಯೂಸಿಂಗ್ ಬಟ್ಟೆಯನ್ನು ಈ ಬಟ್ಟೆಯ ಮೇಲೆ ಇಟ್ಟು ಇನ್ನೊಮ್ಮೆ ಅದನ್ನು ಒಟ್ಟಿಗೆ ಪ್ರೆಸ್ ಮಾಡಿ.

ಇದನ್ನು ಮುಗಿಸಿದ ಮೇಲೆ, ಕಾಲರ್ ಪೀಸನ್ನು ತಿರುಗಿಸಿ, ಬಲಭಾಗ ನಿಮ್ಮ ಕಡೆ ನೋಡುವಂತಿರಬೇಕು ಮತ್ತು ಇನ್ನೊಂದು ಮೇನ್ ಬಟ್ಟೆಯನ್ನು ಅದರ ಮೇಲಿಡಿ, ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ನಾವು ಸೈಡ್ ಮತ್ತು ಮೇಲ್ಭಾಗವನ್ನು ಹೊಲೆಯುತ್ತೇವೆ. ಕಾಲರ್ ಪೀಸನ್ನು ಊಷಾ ವಂಡರ್ ಸ್ಟಿಚ್ ಪ್ಲಸ್ ಹತ್ತಿರ ತೆಗೆದುಕೊಂಡು ಹೋಗಿ ಹೊಲೆಯಲು ಪ್ರಾರಂಭಿಸಿ. ನೀವು ಒಂದು ನೇರವಾದ ಹೊಲಿಗೆಯನ್ನು ಎಲ್ಲಾ ಮೂರು ಕಡೆ ಪಿವಟ್ ಟೆಕ್ನಿಕನ್ನು ಬಳಸಿ ಹಾಕಬೇಕು. ಮುಗಿಸಿದ ಏಲೆ ಹೆಚ್ಚಾದ ದಾರವನ್ನು ಕತ್ತರಿಸಿ.






ನೀವು ನೋಡಬಹುದು, ನಾವು ಈ ಮೂರು ಕಡೆ ಹೊಲೆದಿದ್ದೇವೆ. ಒಂದು ಸರ್ತಿಗೆ ಒಂದು ಕಡೆ ಮಾಡಿ. ಇದನ್ನು ಮುಗಿಸಿದ ಏಲೆ, ಕಾಲರನ್ನು ತಿರುಗಿಸಿ, ಈಗ ನಮ್ಮ ನೆಹರು ಜಾಕೆಟಿಗೆ ಅದನ್ನು ಸೇರಿಸುವ ಸಮಯ. ಮೇನ್ ಬಟ್ಟೆಯನ್ನು ತೆಗೆದುಕೊಳ್ಳಿ, ಕಾಲರ್ ಬಟ್ಟೆಯ ಹೊಲೆಯದೆ ಇರುವ ಭಾಗವನ್ನು ನೆಕ್ ಲೈನಿಗೆ ಒಳಗಿನಿಂದ ಟುಟೋರಿಯಲಿನಲ್ಲಿ ತೋರಿಸಿದಂತೆ ಪಿನ್ ಮಾಡಿ. ನೀವು ಎರಡು ಲೈನಿಂಗ್ ಬಟ್ಟೆ ಮತ್ತು ಮೇನ್ ಬಟ್ಟೆಗೆ ಪಿನ್ ಮಾಡಿದ್ದೀರಾ ನೋಡಿಕೊಳ್ಳಿ,ಇದಾದ ಮೇಲೆ ಪಿನ್ ಮಾಡಿರುವ ಬಟ್ಟೆಯನ್ನು ಊಷಾ ಮಷೀನಿನ ಹತ್ತಿರ ತಂದು ಹೊಲೆಯಲು ಪ್ರಾರಂಭಿಸಿ ಹೊಲೆಯುತ್ತಾ ಹೋಗುವಾಗ ನಿಧಾನವಾಗಿ ಕಾಲರಿನ ಪಿನ್ ಗಳನ್ನು ತೆಗೆಯುತ್ತಾ ಹೋಗಿ.






ಹೊಲೆದಾದ ಮೇಲೆ, ನಾವು ಹೊಲೆಯದೆ ಇರುವ ಕಾಲರಿನ ಭಾಗವನ್ನು ಕೈಯಲ್ಲಿ ಹೆಮ್ಮ್ ಮಾಡಬೇಕು. ಸೀಮ್ ಅಲೊಯನ್ನನ್ನು ಬಾಟಮಿನ ಒಳಕ್ಕೆ ಮಡಚಿ ಮತ್ತು ಅದನ್ನು ಮೇಲಿಟ್ಟು ಟುಟೋರಿಯೆಲಿನಲ್ಲಿ ತೋರಿಸಿದಂತೆ ಒಳಕ್ಕೆ ಮಡಚಿ. ಇದು ಸ್ವಲ್ಪ ಕಷ್ಟವಾಗಬಹುದು ಸ್ವಲ್ಪ ಹೆಚ್ಚು ಗಮನವಹಿಸಿ. ನಾವೀಗ ಮಡಚಿರುವ ಭಾಗದ ಮೇಲೆ ಹೊಲೆಯೋಣ. ಸೀಮ್ ಅಲೋಯನನ್ನು ಕಾಲರಿನ ಸುತ್ತಲೂ ಹೊಲೆಯುತ್ತಾ ಮಡಚುತ್ತಾ ಹೋಗಿ. ನಿಮ್ಮ ಕೈ ಕೆಲಸ ನೋಡಲು ಹೀಗೆ ಕಾಣಬೇಕು.







ನಾವೇಗ ಎಲ್ಲಾ ಮುಗಿಸಿದಂತೆ! ಫಿನಿಷಿಂಗ್ ಟಚಿಗಾಗಿ,ಆಹಲೇ ಬಿಟ್ಟಿರುವ ಸೈಡ್ ಸೀಮನ್ನು ಹೆಮ್ಮಿಂ ಗ್ ಮಾಡಿ . ಲೈನಿಂಗ್ ಬಟ್ಟೆಯನ್ನು ಒಟ್ಟಿಗೆ ಸೇರಿಸಿ ಅದರ ಮೇಲೆ ಹೊಲೆಯಿರಿ. ಇದನ್ನು ಎರಡೂ ಕಡೆನೂ ಮಾಡಿ. ಇದನ್ನು ಮುಗಿಸಿದ ಮೇಲೆ, ಯಾವುದಾದರೂ ಹೆಚ್ಚುವರಿಯಾದ ದಾರವಿದ್ದರೆ ಅದನ್ನು ಕತ್ತರಿಸಿ, ನಿಮ್ಮ ಕೈ ಕೆಲಸವನ್ನು ಪರೀಕ್ಷಿಸಿ.





ಈಗ ಮುಗಿಸಿದ್ದೇವೆ! ನೀವು ನೆಹರು ಜಾಕೆಟನ್ನು ನಿಮ್ಮ ಆಯ್ಕೆಗನುಗುಣವಾಗಿ ಅಲಂಕರಿಸಿಕೊಳ್ಳಬಹುಸು. ನಾವು ಮ್ಯಚಿಂಗ್ ಅಸ್ಸೆಸರಿಯನ್ನು ಸೇರಿಸಿದ್ದೇವೆ ಮತ್ತು ಘಾಡ ಬಣ್ಣದ ಪಾಕೆಟ್ ಚೌಕ. ಇದು ಅತ್ಯಾಕರ್ಷಕವಾಗಿದೆ ಅಲ್ಲವೇ? ಮೊದುವೆ ಋತುಮಾನಕ್ಕೆ ಹೇಳಿ ಮಾಡಿಸಿದ್ದು. ನೀವು ಇನ್ನು ಏನನ್ನು ನೋಡಲು ಬಯಸುತ್ತೀರ ಎಂದು ನಮಗೆ ಕಮೆಂಟ್ ಸೆಕ್ಷನಿನಲ್ಲಿ ತಿಳಿಸಿ ಮತ್ತು ಈ ಟುಟೋರಿಯಲನ್ನು ಲೈಕ್ ಮಾಡಿ ನಿಮ್ಮ ಟೇಲರಿಂಗ್ ಸ್ನೇಹಿತರೊಂದಿಗೆ ಶೇರ್ ಮಾಡುವುದನ್ನು ಮರೆಯಬೇಡಿ.




We are almost done! For the finishing touches, finish hemming the side seams that we'd left for later. Join the lining fabrics together and sew over them. Do this on both sides. After finishing, cut off any excess threads and examine your handiwork.

Just to recap, in this step, we've attached the collar and hemmed it neatly from the inside, and also completed the leftover side seams.

And we are done! You can embellish the Nehru Jacket as per your preference. We've added a matching accessory and a bright coloured pocket square. Doesn't it look absolutely stylish? A perfect essential for the wedding season.